# ಧಾರ್ಮಿಕ ಸಾಮರಸ್ಯ ಹಾಗೂ ವೈಚಾರಿಕ ವಿಚಾರಗಳು

ಅಶೋಕ ಜಿ. ಎಸ್.

ಸಹ ಪ್ರಾಧ್ಯಾಪಕರು, ಸರ್. ಎಂ. ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ನ್ಯೂ ಟೌನ್, ಭದ್ರಾವತಿ, ಶಿವಮೊಗ್ಗ.

## ABSTRACT:

ಯುವಕರು ಪ್ರತಿಯೊಂದು ಧರ್ಮವನ್ನು ಸಮಾನ ದೃಷ್ಟಿಯಿಂದ ನೋಡು ಬೇಕು. ಎಲ್ಲರೂ ಎಲ್ಲ ಧರ್ಮವನ್ನು ಗೌರವಿಸಬೇಕು. ಗೌರವ ಎಂದರೆ ಬೇರೆ ಧರ್ಮವನ್ನು ಗೌರವಿಸಿದರೆ ನಮ್ಮ ಧರ್ಮವನ್ನೆ ಗೌರವಿಸಿದಂತಾಗುತ್ತದೆ ಎಂದು ಕುವೆಂಪು ಹೇಳುತ್ತಾರೆ

ವಿದ್ಯಾರ್ಥಿಗಳು, ಯುವಕರು 'ಭತ್ತ ಬೆಳೆಯುವ ಗದ್ದೆಗಳಾಗಬೇಕು' ಭತ್ತ ತುಂಬುವ ಚೀಲಗಳಾಗಬಾರದು' ಎಂದು ಕುವೆಂಪು ಹೇಳುತ್ತಾರೆ. ಇಂದು ರಾಜಕೀಯ ಪ್ರೇರಿತವಾಗಿ ವಿಧ್ಯಾರ್ಥಿಗಳು ಯಾವುದೇ ಸಾಹಿತ್ಯ, ಇತಿಹಾಸ ಓದದೇ, ಯಾವುದೇ ಗ್ರಂಥಗಳನ್ನು ಓದದೆ ಭತ್ತ ಬೆಳೆಯುವ ಗದ್ದೆಗಳೂ ಆಗಿಲ್ಲ, ಭತ್ತ ತುಂಬುವ ಚೀಲಗಳೂ ಆಗಿಲ್ಲ ಬರಿ ಸೋರುವ ಚೀಲಗಳಾಗಿವೆ. ಈ ಕಿವಿಯಲ್ಲಿ ಕೇಳಿ ಆ ಕಿವಿಯಲ್ಲಿ ಬಿಡುವ ಪರಿಸ್ಥಿತಿಯುಂಟಾಗಿವೆ. ವಿದ್ಯಾರ್ಥಿಗಳು ರಾಜಕೀಯ ಸಹಭಾಗಿತ್ವದಿಂದ ದೂರವಿರಬೇಕೆಂದು 1948ರಲ್ಲಿ ರಾಧಕೃಷ್ಣನ್ ಆಯೋಗದಲ್ಲಿ ಉಲ್ಲೇಖವಿದೆ. 'ವಿದ್ಯಾರ್ಥಿಗಳು ರಾಜಕೀಯ ಸಹಭಾಗಿತ್ವದಿಂದ ದೂರವಿರಬೇಕು' ಏಕೆಂದರೆ ರಾಜಕಾರಣ ರಾಜಕೀಯ ಜೀವನ ಸರಿಯಾಗಿಲ್ಲ. ಅದು ವಿದ್ವತ್ತುಗಳಿಸುವ ಬದಲು ವಿದ್ವತ್ತುನ್ನು ಹಾಳುಮಾಡುತ್ತದೆ.

ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಬೇಕು 1948 ರಾಧಕೃಷ್ಣನ್ ಆಯೋಗ, ಮೊದಲಿಯಾರ್ ಆಯೋಗ 1956, ಕೋಠಾರಿ ಆಯೋಗ 1966, 1984 ರಾಷ್ಟ್ರೀಯ ಶಿಕ್ಷಣ ನೀತಿ ಹೀಗೆ ಎಲ್ಲಾ ಆಯೋಗಗಳು ಪಠ್ಯತರ ಚಟುವಟಿಕೆ ಶೇಕಡ 70 ಭಾಗ ಇರಬೇಕು ಪಠ್ಯ ಚಟುವಟಿಕೆ ಶೇಕಡ 30 ಭಾಗ ಇರಬೇಕು ಎಂದು ಹೇಳಿವೆ. ಇದನ್ನು ಕುರಿತು ತಮ್ಮ ಅಭಿಪ್ರಾಯವನ್ನು ಕುವೆಂಪು ಅವರು ವ್ಯಕ್ತಪಡಿಸಿದ್ದಾರೆ. ಯುವಕರು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಕುವೆಂಪು ಹೇಳುತ್ತಾರೆ.

ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಪ್ರತಿಯೊಂದು ಆಯೋಗಗಳನ್ನು ಅವಲೋಕಿಸಿದಾಗ ಕಂಡುಬರುವುದು ಪಠ್ಯೇತರ ಚಟುವಟಿಕೆಯಲ್ಲಿ ಕಡಿಮೆ ಅವಕಾಶ ಸಿಗುತ್ತಿರುವುದು ಕಂಡು ಬರುತ್ತದೆ. ವಿದ್ಯಾರ್ಥಿಗಳು ಅದರಲ್ಲೂ ಯುವಜನಾಂಗ ರಾಜಕೀಯ ಮತ್ತು ಗುಂಪುಗಾರಿಕೆಯಿಂದ ದೂರವಿರಬೇಕು. ಇವರ ನಡತೆ ಸತ್ಯ ಮತ್ತು ಮೌಲ್ಯಯುತವಾಗಿರಬೇಕು. ಆದರೆ ಇಂದು ಪಠ್ಯವನ್ನೇ ಶೇಕಡ 100 ರಷ್ಟಾಗಿ ಮಾಡಿಕೊಂಡು ವಿದ್ಯಾರ್ಥಿಗಳು ಪುಸ್ತಕದ ಹುಳುಗಳಾಗುತ್ತಿದ್ದಾರೆ. ಈಗ ಪುಸ್ತಕವನ್ನು ಬಿಟ್ಟು ಯಂತ್ರರ್ಷೀ ಹುಳುವಾಗುತ್ತಿದ್ದಾರೆ ಎಂದು ಕುವೆಂಪು

ಅಭಿಪ್ರಾಯ ಪಡುತ್ತಾರೆ.

**KEYWORDS:**

ಯುವಜನಾಂಗ, ಧಾರ್ಮಿಕ ಸಾಮರಸ್ಯ, ಶಿಕ್ಷಣ, ಪಠ್ಯೇತರ ಚಟುವಟಿಕೆ, ಆಯೋಗ.

ವಿದ್ಯಾರ್ಥಿಗಳು, ಯುವಕರು 'ಭತ್ತ ಬೆಳೆಯುವ ಗದ್ದೆಗಳಾಗಬೇಕು' ಭತ್ತ ತುಂಬುವ ಚೀಲಗಳಾಗಬಾರದು' ಎಂದು ಕುವೆಂಪು ಹೇಳುತ್ತಾರೆ. ಇಂದು ರಾಜಕೀಯ ಪ್ರೇರಿತವಾಗಿ ವಿಧ್ಯಾರ್ಥಿಗಳು ಯಾವುದೇ ಸಾಹಿತ್ಯ, ಇತಿಹಾಸ ಓದದೇ, ಯಾವುದೇ ಗ್ರಂಥಗಳನ್ನು ಓದದೆ ಭತ್ತ ಬೆಳೆಯುವ ಗದ್ದೆಗಳೂ ಆಗಿಲ್ಲ, ಭತ್ತ ತುಂಬುವ ಚೀಲಗಳೂ ಆಗಿಲ್ಲ ಬರಿ ಸೋರುವ ಚೀಲಗಳಾಗಿವೆ. ಈ ಕಿವಿಯಲ್ಲಿ ಕೇಳಿ ಆ ಕಿವಿಯಲ್ಲಿ ಬಿಡುವ ಪರಿಸ್ಥಿತಿಯುಂಟಾಗಿವೆ. ವಿದ್ಯಾರ್ಥಿಗಳು ರಾಜಕೀಯ ಸಹಭಾಗಿತ್ವದಿಂದ ದೂರವಿರಬೇಕೆಂದು 1948ರಲ್ಲಿ ರಾಧಕೃಷ್ಣನ್ ಆಯೋಗದಲ್ಲಿ ಉಲ್ಲೇಖವಿದೆ. 'ವಿದ್ಯಾರ್ಥಿಗಳು ರಾಜಕೀಯ ಸಹಭಾಗಿತ್ವದಿಂದ ದೂರವಿರಬೇಕು' ಏಕೆಂದರೆ ರಾಜಕಾರಣ ರಾಜಕೀಯ ಜೀವನ ಸರಿಯಾಗಿಲ್ಲ. ಅದು ವಿದ್ವತ್ತುಗಳಿಸುವ ಬದಲು ವಿದ್ವತ್ತುನ್ನು ಹಾಳುಮಾಡುತ್ತದೆ.

ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಬೇಕು 1948 ರಾಧಕೃಷ್ಣನ್ ಆಯೋಗ, ಮೊದಲಿಯಾರ್ ಆಯೋಗ 1956, ಕೋಠಾರಿ ಆಯೋಗ 1966, 1984 ರಾಷ್ಟ್ರೀಯ ಶಿಕ್ಷಣ ನೀತಿ ಹೀಗೆ ಎಲ್ಲಾ ಆಯೋಗಗಳು ಪಠ್ಯತರ ಚಟುವಟಿಕೆ ಶೇಕಡ 70 ಭಾಗ ಇರಬೇಕು ಪಠ್ಯ ಚಟುವಟಿಕೆ ಶೇಕಡ 30 ಭಾಗ ಇರಬೇಕು ಎಂದು ಹೇಳಿವೆ. ಇದನ್ನು ಕುರಿತು ತಮ್ಮ ಅಭಿಪ್ರಾಯವನ್ನು ಕುವೆಂಪು ಅವರು ವ್ಯಕ್ತಪಡಿಸಿದ್ದಾರೆ. ಯುವಕರು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಕುವೆಂಪು ಹೇಳುತ್ತಾರೆ.

ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಪ್ರತಿಯೊಂದು ಆಯೋಗಗಳನ್ನು ಅವಲೋಕಿಸಿದಾಗ ಕಂಡುಬರುವುದು ಪಠ್ಯೇತರ ಚಟುವಟಿಕೆಯಲ್ಲಿ ಕಡಿಮೆ ಅವಕಾಶ ಸಿಗುತ್ತಿರುವುದು ಕಂಡು ಬರುತ್ತದೆ. ವಿದ್ಯಾರ್ಥಿಗಳು ಅದರಲ್ಲೂ ಯುವಜನಾಂಗ ರಾಜಕೀಯ ಮತ್ತು ಗುಂಪುಗಾರಿಕೆಯಿಂದ ದೂರವಿರಬೇಕು. ಇವರ ನಡತೆ ಸತ್ಯ ಮತ್ತು ಮೌಲ್ಯಯುತವಾಗಿರಬೇಕು. ಆದರೆ ಇಂದು ಪಠ್ಯವನ್ನೇ ಶೇಕಡ 100 ರಷ್ಟಾಗಿ ಮಾಡಿಕೊಂಡು ವಿದ್ಯಾರ್ಥಿಗಳು ಪುಸ್ತಕದ ಹುಳುಗಳಾಗುತ್ತಿದ್ದಾರೆ. ಈಗ ಪುಸ್ತಕವನ್ನು ಬಿಟ್ಟು ಯಂತ್ರರ್ಷೀ ಹುಳುವಾಗುತ್ತಿದ್ದಾರೆ ಎಂದು ಕುವೆಂಪು ಅಭಿಪ್ರಾಯ ಪಡುತ್ತಾರೆ.

**ಯುವಜನಾಂಗ ಮತ್ತು ಧಾರ್ಮಿಕ ಸಾಮರಸ್ಯ:**

ಯುವಕರು ಪ್ರತಿಯೊಂದು ಧರ್ಮವನ್ನು ಸಮಾನ ದೃಷ್ಟಿಯಿಂದ ನೋಡು ಬೇಕು. ಎಲ್ಲರೂ ಎಲ್ಲ ಧರ್ಮವನ್ನು ಗೌರವಿಸಬೇಕು. ಗೌರವ ಎಂದರೆ ಬೇರೆ ಧರ್ಮವನ್ನು ಗೌರವಿಸಿದರೆ ನಮ್ಮ ಧರ್ಮವನ್ನೆ ಗೌರವಿಸಿದಂತಾಗುತ್ತದೆ ಎಂದು ಕುವೆಂಪು ಹೇಳುತ್ತಾರೆ.

ಎಲ್ಲಾ ಮಾನವರು ವಿಶ್ವಮಾನವರಾಗಬೇಕು, 'ಮನುಜಮತ' 'ವಿಶ್ವಪತ' ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಮಂತ್ರಗಳನ್ನು ಎಲ್ಲಾ ಯುವ ಜನಾಂಗ ಮನದಟ್ಟು ಮಾಡಿಕೊಳ್ಳಬೇಕು. ಗ್ರಾಮೀಣ ಸೊಗಡಿನ ಬದುಕು ಇಂದು ಬಹಳ ಮುಖ್ಯ ಗ್ರಾಮೀಣ ಮನಸ್ಥಿತಿಯೂ ಬಹಳ ಮುಖ್ಯ, ಗ್ರಾಮೀಣ ಮನಸ್ಥಿತಿಯ ಮನಸ್ಸು ಬಹಳ ಉತ್ತಮವಾಗಿರುತ್ತದೆ. ಅದನ್ನು ಪೊಷಿಸಿ ಸಂರಕ್ಷಿಸ ಬೇಕು. ಸಂರಕ್ಷಣೆಗೆ ತನು ಮನವನ್ನು ಅರ್ಪಿಸ ಬೇಕು. ಇದನ್ನು ಕುರಿತು ಮಾಹಾಲಿಂಗರಂಗ ಯುವಕರ ಮನಸ್ಸಿನ ಬಗ್ಗೆ ಕುರಿತು ಹೀಗೆ ಹೇಳುತ್ತಾರೆ. ಇಂತಹ ಮನಸ್ಥಿತಿಯನ್ನು ಯುವಜನಾಂಗ ಬದಲಾಯಿಸಿಕೊಳ್ಳಬೇಕು.

**ಹಾಲನೆರೆದರೆ ಕುಡಿಯಲೊಲ್ಲದು**
**ಬಾಲಕನ ತೆರೆನೆಂತ ಮನವಿದು**
**ಕೇಳಲೊಲ್ಲದು ಹಿತವನರಿಯದ ಮುರ್ಖನಂದದಲಿ**
**ಬಾಲಕಿಯನುಪಲಾಲಿಸುವವೊಲು**
**ಬೋಳಯಿಸಿ ತನ್ನೋಳುಗು ಮಾಡಲು**
**ಮೇಲೆ ಮೇಲದ ಮೆಲ್ಲ ಮೆಲ್ಲನೆ ಕೇಳತೊಡಗುವುದು**

ಹೀಗೆ ಯುವಜನಾಂಗದ ಮನಸ್ಸು ಬದಲಾಯಿಸಿಕೊಳ್ಳಬೇಕು. ಹೇಗೆಂದರೆ ಚಿಕ್ಕ ಮಕ್ಕಳು ಹೇಗೆ ಹಾಲು (ಅಮೃತ) ಕುಡಿಯಲು ಮನಸ್ಸು ಮಾಡುವುದಿಲ್ಲ ಮತ್ತು ಉತ್ತಮ ವಿಚಾರವನ್ನು ಕೇಳದ ಮೂರ್ಖತನದ ಮನಸ್ಸು. ಬಾಲಕಿಯನ್ನು ತಾಯಿಯು ಯಾವ ರೀತಿ ರಕ್ಷಿಸಿ ನಿಧಾನಕ್ಕೆ ಬದಲಾಯಿಸುತ್ತಾರೊ ಹಾಗೆ ನಿಧಾನಕ್ಕೆ ವಿಧ್ಯಾರ್ಥಿಗಳ ಮತ್ತು ಯುವಜನಾಂಗದ ಮನಸ್ಸನ್ನು ಬದಲಾಯಿಸಬೇಕು.

ಪ್ರತಿಯೊಬ್ಬ ಮಾನವನನ್ನು ವಿಶ್ವಮಾನವನನ್ನಾಗಿ ಮಾಡಬೇಕೆಂದು ಕುವೆಂಪು ಹೇಳುತ್ತಾರೆ. 'ಮನುಜಮತ' 'ವಿಶ್ವಪಥ' ಸರ್ವೋದಯ ಪ್ರಜ್ಞೆ ಎಲ್ಲಾ ಮಾನವರಲ್ಲೂ ಇರಬೇಕಾಗುತ್ತದೆ. ಇದನ್ನು ಕುರಿತು 'ಅನಿಕೇತನ' ಕವನದಲ್ಲಿ ಹೀಗೆ ಹೇಳುತ್ತಾರೆ.

**ಓ ನನ್ನ ಚೇತನ, ಆಗು ನೀ ಅನಿಕೇತನ**
**ರೂಪ ರೂಪಗಳನು ದಾಟಿ ನಾಮ ಕೋಟಿಗಳನು**
**ಮೀಟಿ ಎದೆಯ ಬಿರಿಯೆ ಭಾವ ಧೀಟಿ ಓ ನನ್ನ**
**ಚೇತನ ಆಗು ನೀ ಅನಿಕೇತನ**

ಎಂದು ಕುವೆಂಪು ಅಭಿಪ್ರಾಯ ಪಡುತ್ತಾರೆ. ಯುವ ಜನಾಂಗ ಮತ ಬ್ರಾಂತಿ

ಇಂದ, ಮತ ಸಂಘರ್ಷಕ್ಕೆ ಒಳಗಾಗುತ್ತಾರೆ. ಇದನ್ನು ಕುವೆಂಪು ಹೇಳಿದ ರೀತಿ "ನೂರು ಮತದ ಹೊಟ್ಟು ತೂರಿ, ಎಲ್ಲ ತತ್ವದೆಲ್ಲೆ ಮೀರಿ ನಿರ್ದಿಗಂತವಾಗಿ ಏರಿ, ಓ ನನ ಚೇತನ, ಆಗು ನೀ ಅನಿಕೇತನ". ಯುವ ಜನಂಗ ಧಾರ್ಮಿಕ ಸಾಮರಸ್ಯದಿಂದ, ವಿಶ್ವಮಾನವ ಪ್ರಜ್ಞೆಯಿಂದ ಆನಂತ ಪ್ರಜ್ಞೆಗೆ ತನ್ನನ್ನು ತಾನು ನಿತ್ಯಯೋಗಿಯಾಗಿ ಅನಂತವಾಗಿಸಬೇಕೆಂದು ಅಭಿಪ್ರಾಯ ಪಡುತ್ತಾರೆ.

ಯುವ ಜನಾಂಗ ಭವಿಷ್ಯದ ಪ್ರಜೆಯಾಗಬೇಕು, ಬಹುಷ್ಯ ತಾನು ಮುಂದಿನ ಯುವ ಜನಾಂಗಕ್ಕೆ ತನ್ನ ಕೊಡುಗೆ ಏನು ಎಂದು ಪತ್ತೆ ಹಚ್ಚಬೇಕೆಂದು ಕುವೆಂಪು ಅವರು ಕವಿರಾಜಮಾರ್ಗದ ವಿಚಾರ ದಾಖಲಿಸುತ್ತಾ, ಪರಧರ್ಮ, ಪರ ವಿಚಾರವನ್ನು ಯುವ ಜನಾಂಗಅರಿಯಬೇಕು. ಯುವಜನಾಂಗವನ್ನು ಕುರಿತು ಹೀಗೆ ಹೇಳುತ್ತಾರೆ.

ಕಸವರವೆಂಬುದು ನೆರೆಸೈರಿಸಾಲಪರ್ೊಡೆ, ಪರಧರ್ಮಂ ಪರವಿಚಾರಂ! ಪರಧರ್ಮ ಪರವಿಚಾರಕ್ಕೆ ಯುವ ಜನಾಂಗ ಮನ್ನಣೆ ಕೊಡಬೇಕು. ಯುವಜನಾಂಗಕುರಿತ ಮಹಲಿಂಗ ರಂಗನ ಅಭಿಪ್ರಾಯಗಳನ್ನು ದಾಖಲಿಸುತ್ತಾರೆ.

**"ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ದೇವಾಗಾರಮಂ ಮಾಡಿಸ**
**ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್ ನಂಬಿದ**
**ರ್ಗೆರೆವಟ್ಟಾಗಿರು, ಶಿಷ್ಯರಂ ಪೊರೆ ಎನುತ್ತಿಂತೆಲ್ಲಮಂ ಪಿಂತೆ"**

ಹೀಗೆ ಅನೇಕ ರೀತಿ ಮುಂದಿನ ಯುವ ಜನಂಗ ಸರ್ವ ರೀತಿಯಲ್ಲೂ ಸರ್ವಜನಾಂಗದ ತೋಟವಾಗಬೇಕೆಂದು ಹೇಳುತ್ತಾರೆ. ಈಗ ಯುವಜನಾಂಗ ಯಾವ ರೀತಿ ಆಗಿದೆ ಎಂದರೆ. "ಕೆರೆಯಂ ಮುಚ್ಚಿಸು, ಬಾವಿ ಸವೆಸು, ದೇವಾಗಾರ/ ದೇವಸ್ಥಾನವನ್ನು ಕೆಡವಿಸು" ನಂಬಿದವರನ್ನು ಬಿಟ್ಟು ಓಡಿ ಹೋಗು ಎಂಬ ಮನಸ್ಥಿತಿಯನ್ನು ಇಂದು ಯುವ ಜನಾಂಗ ಹೊಂದಿದೆ. ಕುವೆಂಪುರವರು ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಬರೆಯುವ ಸಂದರ್ಭದಲ್ಲಿ ವಿವೇಕಾನಂದರ ಅಭಿಮತವನ್ನು ಒಪ್ಪು ತ್ತಾರೆ.

ಕಬ್ಬಿಣದಂತ ಮಾಂಸಖಂಡಗಳನ್ನು ಹೊಂದಿದ, ಉಕ್ಕಿನಂತ ನರನಾಡಿಗಳನ್ನು ಹೊಂದಿದ, ಆದರ್ಶ ಹೊಂದಿದೆಕ್ಕೆ ಕಟ್ಟುಬಿದ್ದು ಬದ್ದರಾಗಿದ್ದ ಹಿಡಿಯಷ್ಟು ಯುವಕ ಯುವತಿಯರನ್ನು ನಾನು ಜಗತ್ತಿನ ಇತಿಹಾಸವನ್ನು ಬದಲಿಸುತ್ತೇನೆ. ಎಂಬ ವಿವೇಕಾನಂದರ ಅಭಿಮತವಾನ ಒಪ್ಪಿತ್ತಾರೆ.

ಅಹಂಕಾರದಿಂದ ಯುವಜನಾಂಗ ಪರರ ವಿಚಾರಗಳಿಗೆ ಮನ್ನಣೆಕೊಡದೆ ಜೀವನವನ್ನೇ ಹಾಳುಮಾಡಿಕೊಳ್ಳುತ್ತಿದ್ದಾರೆ. ಯಂತ್ರಸ್ತ್ರೀಯನ್ನು (ಮೊಬೈಲ್) ಬಳಸುತ್ತಾ ಯುವ ಜನಾಂಗ ಅಲ್ಪ ಜ್ಞಾನಿಗಳಾಗುತ್ತಿದ್ದಾರೆ.

1. ಯುವಜನಾಂಗದ ಧಾರ್ಮಿಕ ಸಾಮರಸ್ಯ ಕಳೆದುಕೊಳ್ಳುತ್ತಿದ್ದಾರೆ. ವೈಚಾರತೆಯನ್ನು ಕುರಿತು ಹೂವ ದೇವರು ಹೂ ಕುಯ್ಯಲು ಬಂದನು ಪೂಜಾರಿ; ಹೂ ಬುಟ್ಟಿ ಅದೋ ಕೈಯಲ್ಲಿ ಹೂವುಗಳ ಚೆಲುವಿಗೆ ದೇವರೆ ಮಾರಿ, ಪೂಜಾರಿಯೇ ಕಟುಕನೇ ಇಲ್ಲ ಹಕ್ಕಿಯ ಮರಿಗಳ ಕುತ್ತಿಗೆ ಮುರಿದು. ಬೇಡನು ಕೊಲ್ಲುವ ರೀತಿಯಲ್ಲಿ ಹೂಗಳ ತೊಟ್ಟನು ತಿರುವಿ ಹರಿದು ಬುಟ್ಟಿಗೆ ಬಿಡ್ವನು ಪ್ರೀತಿಯಲಿ.
2. ಯುವ ಜನಾಂಗದ ವಿಶ್ವಮಾನವ ಪ್ರಜ್ಞೆಯನ್ನು ಬೆಳಸಿಕೊಳ್ಳಬೇಕು. ಯಾವುದೇ ವ್ಯಕ್ತಿ ಜಾತಿಯಿಂದ ಮುಕ್ತನಾಗಬೇಕು, ನೈತಿಕ ವ್ಯಕ್ತಿತ್ವದಿಂದ ಮುಖ್ಯನಾಗಬೇಕು ಎಂಬ ಪರಿಕಲ್ಪನೆ ಕುವೆಂಪು ಅವರದಾಗಿತ್ತು. ಹಾಗಾಗಿ ಕುವೆಂಪು ಅವರ ಜಾತ್ಯಾತೀತ ಮನೋಭಾವದಿಂದ ಮೂಡಿ ಬಂದ ಆಶಯವೇ ವಿಶ್ವಮಾನವ ಸಂದೇಶವಾಗಿದೆ. ಬುದ್ಧ, ಬಸವರ ಹಾಗೆ ಸಮಾಜದಲ್ಲಿ ವ್ಯಕ್ತಿ ಸ್ವತಂತ್ರವಾಗಿ, ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕೆಂದು ಅವರು ಹೇಳುತ್ತಿದ್ದರು.
3. ಯುವಜನಾಂಗ ರಾಜಕೀಯ ಪ್ರಜ್ಞೆ /ಸಾಮಾಜಿಕ ಪ್ರಜ್ಞೆ ಅನುಸರಿಸ ಬೇಕು
4. ಯುವಜನಾಂಗ ವೈಚಾರಿಕ ಪ್ರಜ್ಞೆ ಅಳವಡಿಸಿಕೊಳ್ಳ ಬೇಕು.

ಸಪ್ತ ಸೂತ್ರ: "ಮನುಷ್ಯಜಾತಿ ತಾನೋಂದೆ ವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.

ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರ.

ಅಂತ್ಯಜ, ಷಿಯಾ, ಸುನ್ನಿ, ಕ್ಯಾಥೋಲಿಕ್, ಪ್ರೊಟೆಸ್ಟಂಟ್, ಸಿಖ್, ನಿರಂಕಾರಿ ಇತ್ಯಾದಿ, ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.

ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿ ಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ, ವಿನಾಶಗೊಳಿಸಬೇಕು.

ಮತ ತೊಲಗಿ ಆಧ್ಯಾತ್ಮ ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು. ಮತ 'ಮನುಜಮತ'ವಾಗಬೇಕು; ಪಥ 'ವಿಶ್ವಪಥ'ವಾಗಬೇಕು.

ಮತ ಗುಂಪುಕಟ್ಟುವ ವಿಷಯವಾಗಬಾರದು. ಯಾರೂ ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ ತನ್ನ ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ, ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪುಕಟ್ಟಿ ಜಗಳ ಹಚ್ಚುವಂತಾಗಬಾರದು. ಯಾವ ಹಿಂದು ಗ್ರಂಥವೂ 'ಏಕೈಕ ಪರಮಪುಜ್ಯ'

ಧರ್ಮ ಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ ದರ್ಶನವನ್ನು ತಾನೆ ನಿರ್ಣಯಿಸಿ ಕಟ್ಟಿಕೊಳ್ಳಬೇಕು.

ಧರ್ಮ, ಜಾತಿ ಲಿಂಗ, ತಾರತಮ್ಮ ಮಾಡದೇ ಬಹುತ್ವದ ನೆಲೆಗಟ್ಟಿನಿಂದ ಯೋಚಿಸಬೇಕು ಹಾಗು ಯುವಜನರು ಯಾವುದೇ ಪಕ್ಷದ ಗುಲಾಮರಾಗದೆ/ ಒಳಪಡದೇ ಸರ್ವಪ್ರಜ್ಞೆ ಬೆಳಸಿಕೊಳ್ಳಬೇಕೆಂದು ಕುವೆಂಪು ವಿಧಿತಗೊಳಿಸುತ್ತಾರೆ.

ಯುವಜನಾಂಗವು ವೈಚಾರಿಕ ಪ್ರಜ್ಞೆಯನ್ನು ಅಳವಡಿಸಿಕೊಳ್ಳಬೇಕೆಂದು ಸ್ವತ ತಾವೇ ತಮ್ಮ ಮಗನಿಗೆ ‘ಮಂತ್ರ ಮಾಂಗಲ್ಯ’ ಎಂಬ ವಿವಾಹವನ್ನು ಮಾಡಿಸಿದರು. ಮದುವೆ ಹೆಸರಿನಲ್ಲಿ ನಡೆಯುವ ಕಂದಾಚಾರಗಳನ್ನು ವಿರೋಧಿಸಿ ಅದಕ್ಕೆ ಪ್ರತಿಯಾಗಿ ಅದಕ್ಕೆ ‘ಮಂತ್ರಮಾಂಗಲ್ಯ’ ಎಂಬ ಸರಳ ವಿವಾಹ ಪದ್ದತಿ ಪರಿಚಯಿಸಿದರು ಅವರು ಯುವ ಜನಾಂಗಕ್ಕೆ ಭೋದಿಸುವದರ ಜೊತೆಗೆ ತಮ್ಮ ಮಗ ಪೂರ್ಣಚಂದ್ರ ತೇಜಸ್ವಿಯವರ ವಿವಾಹವನ್ನು ‘ಮಂತ್ರ ಮಾಂಗಲ್ಯ ರೀತಿಯಲ್ಲಿ ನೆರವೇರಿಸಿದರು.

ಇಂದಿನ ಯುವ ಜನಾಂಗ ಇತ್ತಿಚೀನ ದಿನಗಳಲ್ಲಿ ಸರಳವಿವಾಹ, ಮಂತ್ರ ಮಾಂಗಲ್ಯ, ಸಾಮೂಹಿಕದಂತಹ ಪದ್ದತಿಗಳನ್ನು ಅನುಸರಿಸಿದ್ದಾರೆ. ಇದನ್ನು ಅನುಸರಿಸಿ ಧಾರ್ಮಿಕ ಪುಣ್ಯಕ್ಷೇತ್ರಗಳಲ್ಲೂ ಅನುಸರಿಸುತ್ತಾರೆ.

ಯುನಜನಾಂಗ ದೃಷ್ಟಟದ (ಮದ್ಯಪಾನ, ದೂಮಪಾನ) ದಾಸರಾಗುತ್ತಿದ್ದಾರೆ. ಇವು ಬಹುಬೇಗ ಮನಸ್ಸಿಗೊಗ್ಗುತ್ತವೆ, ಪ್ರಲೋಭನೆಗಳಿಗೆ ಒಳಗಾಗುವ ಯುವಕರ ಯುವತಿಯರಿಗೆ ಮನವರಿಕೆ ಮಾಡಬೇಕು.

**ಪರಾಮರ್ಶನ ಗ್ರಂಥಗಳು:**

1. ಯಾದವಾಡ ಬಿ. ಎಸ್. , (2004), ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ, ವಿದ್ಯಾನಿಧಿ ಪ್ರಕಾಶನ, ಗದಗ.
2. ಮಹಲಿಂಗರಂಗ, (1970), ಅನುಭವಾಮೃತ, ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕುವೆಂಪು, (2006), ಪಾಂಚಜನ್ಯ, ಉದಯ ರವಿ ಪ್ರಕಾಶನ, ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.